ಇಂದು ದಿ: **15.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರಃ ಶ್ರೀ ಎನ್ ಜಿ., ವಕೀಲರಿಂದ

ನಮ್ಮ ತಂದೆಯ ಹೆಸರು ಶಿವಣ್ಣ. ನಮ್ಮ ತಂದೆಯ ತಂದೆಯ ಹೆಸರು ಹನುಮಂತಪ್ಪ. ನಮ್ಮ ತಂದೆ ಈ ದಾವೆಯನ್ನು ಸಲ್ಲಿಸಿದ ನಂತರ ಮೃತಪಟ್ಟಿರುತ್ತಾನೆ. ನಿಡಿಃ 1 ರಲ್ಲಿರುವವರು ನಮ್ಮ ತಂದೆ ಅಲ್ಲ. ನಿಪಿಃ 1 ರಲ್ಲಿವವರು ನಮ್ಮ ತಂದೆ ಅಲ್ಲ. ನಿಪಿಃ 1 ರ ಮೂಲ ಪ್ರತಿ ನನ್ನ ಬಳಿ ಇದೆ ಎಂದರೆ ಸಾಕ್ಷಿ ಕಳೆದುಹೋಗಿದೆ ಎಂದು ಹೇಳುತ್ತಾರೆ. ನಮ್ಮ ತಂದೆ ಈ ನ್ಯಾಯಾಲಯಕ್ಕೆ ಹಾಜರು ಆಗಿಲ್ಲ. ನಿಡಿಃ 1 ರಲ್ಲಿರುವ ಸಹಿ ಮತ್ತು ಸಮನ್ಸ್ ನಲ್ಲಿರುವ ಸಹಿ ನಮ್ಮ ತಂದೆಯ ಸಹಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿಃ 1 ಮತ್ತು ಸಮನ್ಸ್‌ನಲ್ಲಿ ಶಿವಣ್ಣ ಎಂದು ಸಹಿ ಇದ್ದು ಎಸ್ ಹೆಚ್ ಎಂಬ ಇನ್ಸಿಯಲ್ ಬರೆದಿಲ್ಲ ಎನ್ನುವುದು ಗೊತ್ತಿರುವುದಿಲ್ಲ. ನಾನು ಬೇರಯವರ ಕಡೆಯಿಂದ ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತೇನೆ. ನಮ್ಮ ತಂದೆ ಜೀವಂತ ಇದ್ದಾಗ ನಾನು ನೋಡಿದ್ದೆ. ನಮ್ಮ ತಂದೆ ಆರಾಧನೆಯ ಕಾರ್ಡ್ ನ್ನು ಮಾಡಿಸಿಲ್ಲ. ನಮ್ಮ ತಂದೆಗೆ ಮತ್ತೊಬ್ಬ ತಂದೆ ಇರಲಿಲ್ಲ. ಮರುಳಮ್ಮ ಇವಳು ನಾವು ಜಮೀನು ಖರೀದಿ ಮಾಡಿದವಳು. ಸದರಿ ಕ್ರಯಪತ್ರ ಕಳೆದು ಹೋಗಿರುತ್ತದೆ. ಅದರ ಜಮೀನು ಸರ್ವೆ ನಂ. 23/1 ಬಿ ಇರುತ್ತದೆ. ಸದರಿ ಜಮೀನು ನಮ್ಮ ತಂದೆಗೆ ಬಂದಿಲ್ಲ. ನಮ್ಮ ತಂದೆಗೆ ಇಬ್ಬರು ಹೆಂಡತಿಯರು. ಅವರು ಗೌರಮ್ಮ ಮತ್ತು ಅಂಬುಜಮ್ಮ. ಸದರಿ ಗೌರಮ್ಮಳಿಗೆ 3 ಜನ ಮಕ್ಕಳು, ಅಂಬುಜಮ್ಮನಿಗೆ ನಾನು ಒಬ್ಬಳೆ ಮಗಳು. ದಾವಾ ಆಸ್ತಿಗಳೆಲ್ಲವು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೆ ನಂ. 23 ರಲ್ಲಿ 2 ಎಕರೆ ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರಿಯಲ್ಲ. ಕ್ರಯ ಪತ್ರ ಮಾಡಿಸಿಕೊಳ್ಳುವಾಗ ನಮ್ಮ ತಂದೆಯ ಹೆಸರು ಶಿವಣ್ಣ ತಂದೆ ಮರುಳಪ್ಪ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಶಿವಣ್ಣ ತಂದೆ ಮರುಳಪ್ಪ ಮತ್ತು ಶಿವಣ್ಣ ತಂದೆ ಹನುಮಂತಪ್ಪ ಇಬ್ಬರು ಒಬ್ಬರೆ ಎಂದರೆ ಸರಿಯಲ್ಲ. ಶಿವಣ್ಣ ತಂದೆ ಮರುಳಪ್ಪ ಇವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಶಿವಣ್ಣ ತಂದೆ ಹನುಮಂತಪ್ಪ ಮೃತಪಟ್ಟಿರುತ್ತಾನೆ. ಶಿವಣ್ಣ ತಂದೆ ಹನುಮಂತಪ್ಪ ಇವನು ಅಡವಿಸಂಗೇನಹಳ್ಳಿ ಗ್ರಾಮದವರು. ನನ್ನ ತವರು ಮನೆ ಅಡವಿಸಂಗೇನಹಳ್ಳಿ ನಮ್ಮ ತಾಯಿಯನ್ನು ಕರೆಸಿದರೆ ನಮ್ಮ ತಂದೆಯ ಫೋಟೋ ಕಂಡು ಹಿಡಿಯುತ್ತಾಳೆ ಎನ್ನುವುದು ನಿಜ.

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.